# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

## ಸಿ.ಸಿ. ನಂ.07/2022

CW-4/PW-2

| | | |
|---|---|---|
| ಹೆಸರು | ಃ- | ಪ್ರಕಾಶ್ |
| ತಂದೆ ಹೆಸರು | ಃ- | ಲೇಟ್ ಶಿವಣ್ಣ |
| ವಯಸ್ಸು | ಃ- | 54 ವರ್ಷ |
| ವೃತ್ತಿ | ಃ- | ವ್ಯವಸಾಯ |
| ವಾಸ ಸ್ಥಳ | ಃ- | ದ್ಯಾವರಸೇಗೌಡನದೊಡ್ಡಿ, ರಾಮನಗರ |
| ದಿನಾಂಕ | ಃ- | 03.08.2023 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದಿರುತ್ತದೆ. ಸದರಿ ದಾಖಲೆಯು ದಿನಾಂಕ 14.08.2021 ರ ಅಮಾನತು ಪಂಚನಾಮೆಯಾಗಿದ್ದು, ಅದನ್ನು ನಿಪಿ-5 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿನ ನನ್ನ ಸಹಿಯನ್ನು ಸುಮಾರು 1 ವರ್ಷದ ಹಿಂದೆ ರಾಮನಗರ ಗ್ರಾಮಾಂತರ ಠಾಣೆಯ ಆವರಣದಲ್ಲಿ ಮಾಡಿದ್ದು, ಪೊಲೀಸರು ಯಾರೋ ಕಳ್ಳರನ್ನು ದಸ್ತಗಿರಿ ಮಾಡಿರುವುದಾಗಿ ಹೇಳಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನನ್ನ ಸಮಕ್ಷಮ ಪೊಲೀಸರು ಏನನ್ನೂ ಅಮಾನತುಪಡಿಸಿಕೊಂಡಿಲ್ಲ. ಸದರಿ ದಾಖಲೆಗೆ ನಾನು ರಾತ್ರಿ 7.30 ರ ಸಮಯಕ್ಕೆ ಸಹಿ ಮಾಡಿದ್ದು ಆ ಸಮಯದಲ್ಲಿ ಕತ್ತಲೆಯಿದ್ದು ಪೊಲೀಸರು ಎರಡು ಅಥವಾ ಮೂರು ಜನರನ್ನು ನನಗೆ ತೋರಿಸಿದ್ದು, ಸದರಿ ವ್ಯಕ್ತಿಗಳನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡುತ್ತಿದ್ದು

ಅವರನ್ನು ಗುರುತಿಸಲು ಆಗುವುದಿಲ್ಲ. ನಿಪಿ-3 ಭಾವಚಿತ್ರದಲ್ಲಿ ಕಾಣುವ ಬೈಕನ್ನು ನಿಪಿ-5 ದಾಖಲೆಗೆ ಸಹಿ ಮಾಡುವ ಸಂದರ್ಭದಲ್ಲಿ ನೋಡಿರುವುದಿಲ್ಲ.

(ಮಾನ್ಯ ಎ.ಪಿ.ಪಿ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ದಿನಾಂಕ 14.08.2021 ರಂದು ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 316/2021 ಕಲಂ 392 ಐಪಿಸಿ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನನ್ನು ಹಾಗೂ ಚಾಸಾ-5 ರವರನ್ನು ಪಂಚರನ್ನಾಗಿ ಸದರಿ ಪೊಲೀಸ್ ಠಾಣೆಗೆ ಕರೆಯಿಸಿ ಪೊಲೀಸರ ವಶದಲ್ಲಿದ್ದ ಇಬ್ಬರು ಆಸಾಮಿಗಳಾದ 1 ರಿಂದ 3 ನೇ ಆರೋಪಿಗಳನ್ನು ತೋರಿಸಿ ಸದರಿಯವರು ದಿನಾಂಕ 06.10.2020 ರಂದು ಮಧ್ಯಾಹ್ನ 3.30 ಸಮಯಕ್ಕೆ ರಾಮನಗರ ಕಸಬಾ ಹೋಬಳಿ ಕಗ್ಗಲಹಳ್ಳಿ ಗ್ರಾಮದ ಪಿರ್ಯಾದಿ ಶ್ರೀಮತಿ ಸರೋಜಮ್ಮರವರು ಅವರ ಹಸುಗಳನ್ನು ಮೇಯಿಸುತ್ತಿದ್ದಾಗ ಪಲ್ಸರ್ ಬೈಕಿನಲ್ಲಿ ಮೇಲೆ ಹೇಳಿದ 3 ಜನ ಆರೋಪಿಗಳು ವಿಳಾಸ ಕೇಳುವ ನೆಪದಲ್ಲಿ ಆಕೆಯನ್ನು ಮಾತನಾಡಿಸಿ ಆಕೆಯ ಕತ್ತಿನಲ್ಲಿದ್ದ 40 ಗ್ರಾಂ ತೂಕದ ಚಿನ್ನದ ಸರವನ್ನು ಕಿತ್ತುಕೊಂಡು ಅದನ್ನು ಬೆಂಗಳೂರಿನ ಕೆಂಗೇರಿಯಲ್ಲಿರುವ ಹಿಂದೂಸ್ತಾನ್ ಗೋಲ್ಡ್ ಕಂಪನಿಯಲ್ಲಿ ಮಾರಾಟ ಮಾಡಿ ಹಣ ಪಡೆದಿರುವುದಾಗಿ ಹಾಗೂ ರಾಬರಿ ಮಾಡಲು ಬಳಸಿದ ದ್ವಿಚಕ್ರ ವಾಹನವನ್ನು ತೋರಿಸಿ ಹಾಜರುಪಡಿಸುವುದಾಗಿ ಹಾಗೂ ಸದರಿ ದ್ವಿಚಕ್ರ ವಾಹವನ್ನು ಅಮಾನತುಪಡಿಸಿಕೊಳ್ಳುವ ಉದ್ದೇಶಕ್ಕಾಗಿ ನಮ್ಮನ್ನು ಪಂಚರನ್ನಾಗಿ ಬರಮಾಡಿಕೊಂಡು ಆ ಸಮಯದಲ್ಲಿ ಆರೋಪಿಗಳು

ಸದರಿ ಠಾಣೆಯ ಮುಂಭಾಗದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನವನ್ನು ತೋರಿಸಿ ಸದರಿ ದ್ವಿಚಕ್ರ ವಾಹನವನ್ನು ಮೇಲೆ ಹೇಳಿದ ಕೃತ್ಯವನ್ನು ಎಸಗಲು ಬಳಸಿರುವುದಾಗಿ ತಿಳಿಸಿದ ಮೇರೆಗೆ ಬೆಳಗ್ಗೆ 10.00 ಗಂಟೆಯಿಂದ 11.00 ಗಂಟೆಯ ಅವಧಿಯಲ್ಲಿ ನಿಪಿ-5 ರಂತೆ ನನ್ನ ಹಾಗೂ ಚಾಸಾ-5 ರವರ ಸಮಕ್ಷಮ ಅಮಾನತು ಮಹಜರ್ ಕ್ರಮವನ್ನು ಜರುಗಿಸಿ ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿರುವುದು ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ನಾನು ಆರೋಪಿಗಳನ್ನು ಹಾಗೂ ನಿಪಿ-3 ಭಾವಚಿತ್ರದಲ್ಲಿ ಕಾಣುವ ಬೈಕನ್ನು ನೋಡಿದ್ದೆ ಎನ್ನುವುದು ಸರಿಯಲ್ಲ. ನಿಪಿ-5 ರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಹಾಗೂ ಆ ಸಮಯದಲ್ಲಿ ಆರೋಪಿಗಳನ್ನು ನಾನು ನೋಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀ ಸವಾಲು ಆರೋಪಿಗಳ ಪರಃ-

2 ನೇ ಆರೋಪಿಯ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

1 ಹಾಗೂ 3 ನೇ ಆರೋಪಿಗಳ ಪರ ವಕೀಲರು ಗೈರು ಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.